# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಸ.ಕಾ.ನಿ.ಅ/ಕಾ.ಪೇ.ಉ.ವಿ/ಬೆಂ/ಪ್ರ.ದ.ಸ/
ಸಭೆಯ ನಡವಳಿ/ಸಂಖ್ಯೆ./377/2022-23

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,
ಕಾಟನ್‌ಪೇಟೆ ಉಪವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ದಿನಾಂಕ:17.09.2022

## ವಾರ್ಡ್ ಸಮಿತಿ ಸಭೆಯ ನಡವಳಿಗಳು

**ವಿಷಯ:-** ದಿನಾಂಕ.17.09.2022 ರಂದು ನಡೆದ ವಾರ್ಡ್ ಸಂಖ್ಯೆ. 137 ರ ಸಮಿತಿ ಸಭೆಯ ನಡವಳಿಗಳು.
**ಉಲ್ಲೇಖ:-** ಆಯುಕ್ತರ ಕಛೇರಿ ಆದೇಶ ಸಂಖ್ಯೆ. ಬಿ12(5)ಪಿ.ಆರ್/35/2020/21, ದಿ. 21.09.2020

**ಸಭೆಗೆ ಹಾಜರಿದ್ದ ವಾರ್ಡ್ ಕಮಿಟಿ ಸದಸ್ಯರು**

- ಶ್ರೀ.ಯೋಗಿಶ್ -ಅಧ್ಯಕ್ಷರು
- ಶ್ರೀ ಮಲ್ಲಿಕಾರ್ಜುನ್ – ಕಾರ್ಯದರ್ಶಿ ಮತ್ತು ಸಂಚಾಲಕರು, ಸ.ಅ, ವಾರ್ಡ್ ಸಂ.137(120)
- ಶ್ರೀಮತಿ ಹೇಮಲತಾ ಸಹಾಯಕ ಕಾರ್ಯಪಾಲಕ ಅಭಿಯಂತರು-ಕಾಟನ್‌ಪೇಟೆ ಉಪ-ವಿಭಾಗ

ವಾರ್ಡ್ ಸಮಿತಿಯ ಅಧ್ಯಕ್ಷರು ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಸ್ವಾಗತವನ್ನು ಕೋರುತ್ತಾ ಸಭೆಯನ್ನು ಪ್ರಾರಂಭಿಸಲು ತಿಳಿಸಿದರು. ಸಭೆಯಲ್ಲಿ ಹಾಜರಿದ ಸದಸ್ಯರು ಹಾಗೂ ಪಾಲಿಕೆಯ ಅಧಿಕಾರಿಗಳು ತಮ್ಮ ಪರಿಚಯ ನೀಡಿ ಸಭೆಯನ್ನು ಪಾರಂಭಲಾಯಿಸಿತು. .

- ವಾರ್ಡ್ ಸಮಿತಿಯ ಅಧ್ಯಕ್ಷರಾದ ಶ್ರೀ.ಯೋಗಿಶ್ ರವರ ಅಧ್ಯಕ್ಷತೆಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಇತರೆ ಸದಸ್ಯರು ಮತ್ತು ಕಾರ್ಯದರ್ಶಿಯವರ ಸಮ್ಮುಖದಲ್ಲಿ ಪ್ರಾರಂಭಿಸಲಾಯಿತು.
- ಬಿನ್ನಿಮೀಲ್‌ರಸ್ತೆ,ಅಕ್ಕಿಪೇಟೆ ರಸ್ತೆ, ಜೈನ್‌ರಸ್ತೆ, ಎನ್.ಪಿ.ಲೇನ್, ಟಿ.ಡಿ.ಲೇನ್‌ಗಳ ರಸ್ತೆಗುಂಡಿ ಮತ್ತು ಚರಂಡಿ ದುರಸ್ಥಿಪಡಿಸುವಂತೆ ವಾರ್ಡ್ ಸಭೆಯಲ್ಲಿ ಸದಸ್ಯರು ಕೋರಿರುತ್ತಾರೆ. ಕೋರಿಕೆಯ ಅನ್ವಯ 2022-23ನೇ ಸಾಲಿನ ಪಿ.ಓ.ಡ್ಯೂ ಅನುದಾನದಲ್ಲಿ ರಸ್ತೆ ಗುಂಡಿ ಮತ್ತು ಚರಂಡಿ ದುರ್ಥಸಿ ಸರಿಪಡಿಸಲು ಅಂದಾಜುಪಟ್ಟಿಯನ್ನು ಸಿದ್ದಿಪಡಿಸಿ ಅನುಮೋದನೆಗೆ ಸಲ್ಲಿಸಲಾಗಿರುತ್ತದೆ.
- ವಾರ್ಡ್‌ನಲ್ಲಿನ ಕೋಳವೆ ಬಾವಿಯಲ್ಲಿನ ಸರಿಪಡಿಸಲು ಕೋರಿರುತ್ತಾರೆ, ಸದರಿ ಕೋರಿಕೆಯ ಅನ್ವಯ ಬಿ.ಡ್ಯೂ.ಎಸ್.ಎಸ್.ಬಿ ಸೂಕ್ತ ಕ್ರಮ ವಹಿಸಲು ಸೂಚಿಸಲಾಗಿರುತ್ತದೆ.
- ನಾಗಮ್ಮನಗರ ಮನೆಗಳಿಗೆ ಬಿ.ಡ್ಯೂ.ಎಸ್.ಎಸ್.ಬಿ ವತಿಯಿಂದ ಹೊಸದಾಗಿ Sanitary Line ಅಳವಡಿಸಲು ಕೋರಿಲಾಗಿರುತ್ತದೆ, ಸದರಿ ಕೋರಿಕೆಯ ಅನ್ವಯ ಕ್ರಮ ಜರುಗಿಸಲು ಬಿ.ಡ್ಯೂ.ಎಸ್.ಎಸ್.ಬಿ ರವರಿಗೆ ತಿಳಿಸಲಾಗುವುದು.
- SBI Quatars ಮುಂಭಾಗದಲ್ಲಿರುವ ಶೌಚಲಾಯವನ್ನು ತೆರವುಗೊಳಿಸಲು ಸೂಚಿಸಿದ್ದು ಸದರಿ ಸೂಚನೆಯ ಅನ್ವಯ ತೆರವುಗೊಳಿಸಲು ಅನುಮೋದನೆ ಕೋರಿ ಮೇಲಾಧಿಕಾರಿಗಳಿಗೆ ಕಡತವನ್ನು ಸಲ್ಲಿಸಲಾಗಿರುತ್ತದೆ.
- ಕೆ.ಪಿ.ಅಗ್ರಹಾರ ಹಾಗೂ ಕಾಟನ್‌ಪೇಟೆನಲ್ಲಿನ ಕಸವೀಲಾವರಿ ಸಮಸ್ಯಗಳ ಬಗ್ಗೆ ಚರ್ಚಿಸಲಾಗಿತ್ತು,ಸದರಿ ಚರ್ಚಿಸಿದಂತೆ ಸದರಿ ಸಭೆಯಲ್ಲಿದ್ದ ಆರ್ಯೋಗ ಪರಿವಿಕ್ಷೀಕರಿಗೆ ಕಸವೀಲಾವರಿ ಸಮಸ್ಯಗಳು ಅತೀ ತುರ್ತಗಾಗಿ ಬಗ್ಗೆಹರಿಸಲು ಹಾಗೂ ಮತ್ತೇ ಕಸವೀಲಾವರಿ ಸಮಸ್ಯಗಳು ಪುನರಾವತನೇಯಾಗದಂತೆ ಕ್ರಮ ವಹಿಸಲು ಸೂಚಿಸಲಾಗಿರುತ್ತದೆ.

- ವಾರ್ಡ್‌ನಲ್ಲಿನ ಬೀದಿ ದೀಪಗಳನ್ನು ಸರಿಪಡಿಸಲು ಸೂಚಿಸಿದಂತೆ,ಸದರಿ ಸದರಿ ಸೂಚನೆಯ ಅನ್ವಯ ದುರಸ್ಥಿಯಲ್ಲಿರುವ ಬೀದಿ ದೀಪಗಳನ್ನು ಸರಿಪಡಿಸಲು ಕಾರ್ಯಪಾಲಕ ಅಭಿಯಂತರು (ವಿದ್ಯುತ್-ಪಶ್ಚಿಮ) ರವರಿಗೆ ಸೂಚಿಸಲಾಗಿರುತ್ತದೆ.
- ವಾರ್ಡ್‌ನಲ್ಲಿನ ವಿದ್ಯುತ್ ಕಂಬಗಳ ಪಕ್ಕದಲ್ಲಿರುವ ಮರಗಳ ಕೊಂಬೆಯನ್ನು ತೆರೆವುಗೋಳಿಸಲು ಸೂಚಿಸಿದ್ದು ಸದರಿ ಸೂಚನೆಯ ಅನ್ವಯ ಆರಣ್ಯ ಅಧಿಕಾರಿ-ಪಶ್ಚಿಮ ರವರಿಗೆ ಕ್ರಮ ಜರುಗಿಸಲು ಸೂಚಿಸಲಾಗಿರುತ್ತದೆ.
- ವಾರ್ಡ್‌ನಲ್ಲಿನ ಬೀಡಾಡಿ ಹಸುಗಳನ್ನು ಹಿಡಿಯಲು ಕೋರಲಾಗಿರುತ್ತದೆ,ಸದರಿ ಕೋರಿಕ್ಕೆ ಅನ್ವಯ ಪಶುಸಂಗೋಪನೆ ಪಶ್ಚಿಮ ರವರಿಗೆ ರವರಿಗೆ ಕ್ರಮ ಜರುಗಿಸಲು ಸೂಚಿಸಲಾಗಿರುತ್ತದೆ.
- ವಾರ್ಡ್‌ನಲ್ಲಿ ಆರ್ಯೋಗ ಶಿಬಿರ ನೆಡೆಸಲು ಕೋರಿರುತ್ತಾರೆ,ಸದರಿ ಕೋರಿಕ್ಕೆ ಅನ್ವಯ ಕ್ರಮ ಜರುಗಿಸಲು ಸೂಚಿಸಲಾಗಿರುತ್ತದೆ.
- ವಾರ್ಡ್‌ನಲ್ಲಿ ನಮ್ಮ ಕ್ಲಿನಿಕ್‌ನ್ನು ಅಶ್ವಥನಗರ 1ನೇ ಮುಖ್ಯ ರಸ್ತೆಯಲ್ಲಿ ಸ್ಥಾಪಿಸಲಾಗುವುದೆಂದು ಸಭೆಯಲ್ಲಿದ್ದ ಸದಸ್ಯರಿಗೆ ತಿಳಿಸಲಾಗಿರುತ್ತದೆ.
- ವಾರ್ಡ್‌ನಲ್ಲಿರುವ ಅಂಗನವಾಡಿ ಮಕ್ಕಳಿಗೆ ಹಾಗೂ ಗರ್ಭಿಣಿ ಹೆಂಗಸರಿಗೆ ಪಾಲಿಕೆ ವತಿಯಿಂದ ಹಾಗೂ ರಾಜ್ಯ ಸರ್ಕಾರ ವತಿಯಿಂದ ನೀಡಲಾಗಿರುವ ವಿಶೇಷ ಕಾರ್ಯಕ್ರಮಗಳನ್ನು ನೆಡೆಸಲು ಕೋರಲಾಗಿರುತ್ತದೆ,ಸದರಿ ಕೋರಿಕ್ಕೆ ಅನ್ವಯ ಕ್ರಮ ಜರುಗಿಸಲು ಸೂಚಿಸಲಾಗಿರುತ್ತದೆ.

ಮಾನ್ಯ ನೋಡಲ್ ಅಧಿಕಾರಿಯವರು ಮುಂದಿನ ಸಭೆಯಲ್ಲಿ ವಾರ್ಡಿನ ಕುಂದು ಕೊರತೆಗಳ ಬಗ್ಗೆ ಸಮಗ್ರವಾಗಿ ಚರ್ಚಿಸಬೇಕೆಂದು ತಿಳಿಸುತ್ತಾ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

**ನಿರ್ಣಯ:-**

ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಸದರಿ ವಾರ್ಡ್‌ನ ಎಲ್ಲಾ ಕುಂದುಕೊರತೆಗಳನ್ನು ಮುಂದಿನ ಸಭೆಯೊಳಗಾಗಿ ಶೀಘ್ರವಾಗಿ ಪರಿಹರಿಸಲು ಅಗತ್ಯ ಕ್ರಮ ಕೈಗೊಳ್ಳಲು ಸಭೆಯು ತಿರ್ಮಾನಿಸಿತ್ತು.

ಸಹಿ/-
ಕಾರ್ಯದರ್ಶಿ
ವಾರ್ಡ್ ಸಮಿತಿ, ವಾರ್ಡ್ ಸಂಖ್ಯೆ.137
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು :**

- ಮಾನ್ಯ ಜಂಟಿ ಆಯುಕ್ತರು (ಪಶ್ಚಿಮ) ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಸಲ್ಲಿಸಿದೆ.
- ಮುಖ್ಯ ಅಭಿಯಂತರರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಸಲ್ಲಿಸಿದೆ.
- ಕಾರ್ಯಪಾಲಕ ಅಭಿಯಂತರರು, ಗಾಂಧಿನಗರ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ
- ಕಾರ್ಯಪಾಲಕ ಅಭಿಯಂತರರು, ವಿದ್ಯುತ್-ಪಶ್ವಿಮ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ
- ಆರ್ಯೋಗ ಅಧಿಕಾರಿಗಳು ಗಾಂಧಿನಗರ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ
- ಕಂದಾಯ ಅಧಿಕಾರಿಗಳು ಗಾಂಧಿನಗರ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ
- ಸಹಾಯಕ ಕಾರ್ಯಪಾಲಕ ಅಭಿಯಂತರರು ಕಾಟನ್‌ಪೇಟೆ ಉಪ-ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ

- ಸಹಾಯಕ ಕಂದಾಯ ಅಧಿಕಾರಿಗಳು ಚಿಕ್ಕಪೇಟೆ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ
- ಅರಣ್ಯ ಅಧಿಕಾರಿಗಳು ಪಶ್ಚಿಮ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ
- ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡ್ಬ್ಯೂ.ಎಸ್.ಎಸ್.ಬಿ ರವರ ಮಾಹಿತಿಗಾಗಿ ಸಲ್ಲಿಸಿದೆ
- ಕಲ್ಯಾಣ ಅಧಿಕಾರಿಗಳು ಪಶ್ಚಿಮ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ